ಶತ್ರು ಆಗಿರುವುದರಿಂದ ಅದನ್ನು ಉಪಚರಿಸಲು ಅಷ್ಟು ಸಾಕೆಂದು ರಾಜನು ಏಳನೆಯ ದಿನ ರಾತ್ರಿ ಹಾಯಾಗಿ ನಿದ್ರಿಸಿದನು.

ಇತ್ತ ಹಾವೊಂದು ಮಾರ್ತಾಂಡ ರಾಜನಿಗೆ ಕಚ್ಚಲೆಂದು ಬಂದಿತ್ತು. ಹಾವಿಗೆ ಅಲ್ಲಿದ್ದ ಸೌಕರ್ಯಗಳನ್ನು ನೋಡಿ ರಾಜನ ಬಗ್ಗೆ ಅನುಕಂಪ ಮೂಡಿತು. ರಾಜನು ತನಗಾಗಿ ಇಷ್ಟೊಂದು ಗೌರವದಿಂದ ಉಪಚರಿಸುವುದನ್ನು ನೋಡಿ ಅದಕ್ಕೆ ಸಂತೋಷವಾಯಿತು. ಹಾವು ಮನಸ್ಸಿನಲ್ಲೇ ಅಂದುಕೊಂಡಿತು, ‘ಇಂತಹ ರಾಜನನ್ನು ಕೊಲ್ಲುವುದು ಸರಿಯಲ್ಲ’ ಎಂದು ಅಲ್ಲಿಂದ ಹಿಂತಿರುಗಿ ಹೊರಟು ಹೋಯಿತು.

ಮಾರ್ತಾಂಡ ರಾಜನ ಆಸ್ಥಾನದಲ್ಲಿ ಮಂತ್ರಿಯೊಬ್ಬನಿದ್ದನು. ಅವನು ಬಹಳ ದುಷ್ಟನಾಗಿದ್ದನು. ಮಂತ್ರಿಯು ರಾಜನನ್ನು ಕೊಲ್ಲಿಸಿ ತಾನೇ ರಾಜನಾಗಬೇಕೆಂದು ಹವಣಿಸುತ್ತಿದ್ದನು. ಹೀಗಿರುವಾಗ ಒಮ್ಮೆ ರಾಜನಿಗೆ ಯಾವುದೋ ಗುಣಪಡಿಸಲಾಗದಂತಹ ಕಾಯಿಲೆ ಬಂದಿತು. ಆಗ ಮಂತ್ರಿಯು ಇದೇ ಸರಿಯಾದ ಸಮಯವೆಂದುಕೊಂಡು ವೈದ್ಯನಿಗೆ ತಿಳಿಸಿ ಔಷಧಿಯಲ್ಲಿ ವಿಷವನ್ನು ಬೆರೆಸಿ ಕೊಡಲು ಸೂಚಿಸಿದನು. ಮಂತ್ರಿಯ ಮಾತಿನಂತೆ ವೈದ್ಯನು ಔಷಧಿಯಲ್ಲಿ ವಿಷವನ್ನು ಬೆರೆಸಿ ರಾಜನಿಗೆ ಕೊಟ್ಟನು.

ವೈದ್ಯನು ಕೊಟ್ಟ ಔಷಧಿಯನ್ನು ರಾಜನು ಕುಡಿಯಬೇಕು ಎನ್ನುವಷ್ಟರಲ್ಲಿ ಅವನ ಎದುರಿಗಿದ್ದ ಮೂರನೆಯ ನುಡಿಮುತ್ತನ್ನು ಓದಿದನು. ‘ಯಾರೇ ಆಗಲಿ ಏನು ಕೆಲಸ ಮಾಡಿದರೂ ಯೋಚಿಸಿ ಮಾಡುವುದು ಅವಶ್ಯಕ’ ಎಂದು ಅದರಲ್ಲಿ ಬರೆದಿತ್ತು. ಆಗ ರಾಜನು ಔಷಧಿಯನ್ನು ಕುಡಿಯಬೇಕೋ ಬೇಡವೋ ಎಂದು ಯೋಚಿಸತೊಡಗಿದನು. ಆಗ ರಾಜನು ವೈದ್ಯನಿಗೆ ಔಷಧಿಯನ್ನು ಕುಡಿದು ತೋರಿಸುವಂತೆ ಆದೇಶ ಮಾಡಿದನು. ವೈದ್ಯನು ಔಷಧಿಯನ್ನು ಕುಡಿಯಲು ನಿಧಾನಿಸುತ್ತಿದ್ದುದನ್ನು ನೋಡಿ ರಾಜನಿಗೆ ಅವನಲ್ಲಿ ಅನುಮಾನ ಬರುವಂತೆ ಮಾಡಿತು.

ವೈದ್ಯನಿಗೆ ತಾನು ಔಷಧಿಯಲ್ಲಿ ವಿಷವನ್ನು ಬೆರೆಸಿರುವುದು ರಾಜನಿಗೆ ತಿಳಿದಿದೆಯೆಂದು ಮೈ ನಡುಕ ಶುರುವಾಯಿತು. ಇನ್ನು ವಿಷಯವನ್ನು ಮುಚ್ಚಿಟ್ಟರೆ ತನ್ನ ಪ್ರಾಣಕ್ಕೆ ಸಂಚಕಾರ ಎಂದು ರಾಜನ ಪಾದಗಳ ಮೇಲೆ ಬಿದ್ದು ತಪ್ಪನ್ನು ಮನ್ನಿಸಬೇಕೆಂದು ಕೇಳಿಕೊಂಡನು. ಇದಕ್ಕೆಲ್ಲ ಕಾರಣ ಮಂತ್ರಿಯೆಂದು ತಿಳಿಸಿದನು. ಮಂತ್ರಿಯು ನಡೆಸಿದ ಸಂಚನ್ನು ವೈದ್ಯನು ವಿವರವಾಗಿ ಮಾರ್ತಾಂಡ ರಾಜನಿಗೆ ತಿಳಿಸಿದನು.

ನಡೆದಿರುವ ವಿಷಯವನ್ನು ಕೂಲಂಕುಷವಾಗಿ ತಿಳಿದುಕೊಂಡ ಮಾರ್ತಾಂಡ ರಾಜನು ವೈದ್ಯನನ್ನು ಕ್ಷಮಿಸಿ ಅರಮನೆಯಿಂದ ಕಳುಹಿಸಿಕೊಟ್ಟನು. ತನ್ನನ್ನು ಕೊಲ್ಲಲು ಸಂಚು ರೂಪಿಸಿದ್ದ ಮಂತ್ರಿಯನ್ನು ಸೆರೆಮನೆಗೆ ಹಾಕಿದನು. ಕಾಯಿಲೆಯಿಂದ ಗುಣಮುಖನಾದ ಬಳಿಕ ರಾಜನು ನುಡಿಮುತ್ತುಗಳನ್ನಿತ್ತ ಪಂಡಿತರನ್ನು ಕರೆಯಿಸಿ ತನ್ನ ಮಂತ್ರಿಯನ್ನಾಗಿ ಮಾಡಿಕೊಂಡನು. ■

# ಮುದ್ದು ಕಂದ



■ **ಮಹೇಶ್ ಎಸ್.ಹೆಚ್. ಹೆಸರೂರ**

ಚಿತ್ರ: ಸಂತೋಷ್ ಸಸಿಹಿತ್ಲು

ಅಮ ಅಮ್ಮ ಉಂಡಿಯ ಡಬ್ಬ
ಮೇಲೆ ಯಾಕೆ ಇಡ್ತಿಯಾ
ದಿನಕ್ಕೆ ಒಂದು ಸಾಕು ಅಂತ
ಎಣಿಸಿ ಎಣಿಸಿ ಕೊಡ್ತಿಯಾ

ಸಕ್ಕರೆ ಜಾಸ್ತಿ ತಿನ್ನಬೇಡ ಎಂದು
ತಾಕೀತು ಮಾಡ್ತಿಯಾ
ರೊಟ್ಟಿಗೆ ತುಪ್ಪ ಜಾಸ್ತಿ ಹಾಕಿ
ತಿನ್ನು ತಿನ್ನು ಅಂತೀಯಾ

ಗುಮ್ಮ ಬಂದ ಅಂತ ಹೇಳಿ
ನನ್ನ ನೀನು ಹೆದರಿಸ್ತಿಯಾ
ಚಾಕೊಲೇಟ್ ಕೊಡಸ್ತಿನಂತ
ಸುಳ್ಳು ಬೇರೆ ಹೇಳ್ತಿಯಾ

ಹೋಮ್ ವರ್ಕ ಮಾಡು ಅಂತ
ಪದೇ ಪದೇ ಹೇಳ್ತಿಯಾ
ಟೀಚರಿಗೆ ಹೇಳ್ತಿನಂತ
ಹೆದರಿಸಿ ಬರಸ್ತಿಯಾ

ಬಾರೋ ಸ್ಕೂಲಿಗೆ ಹೋಗು ಅಂತ
ಬಾಕ್ಸಿಗೆ ಅನ್ನ ಹಾಕ್ತಿಯಾ
ಹೊಟ್ಟೆ ತುಂಬ ತಿನ್ನು ಅಂತ
ಕೆನ್ನೆಗೆ ಮುತ್ತು ಕೊಡ್ತಿಯಾ

ಸ್ಕೂಲ್ ಬ್ಯಾಗ್ ಹಿಡ್ಕೊಂಡು
ಬಸ್ಸು ಹತ್ತು ಅಂತಿಯಾ
ಟಾಟಾ ಮಾಡಿ ಹುಷಾರು ಎಂದು
ಗುಡ್ ಬಾಯ್ ಅಂತಿಯಾ

ಅಮ್ಮನಿಗೆ ನನ್ನ ಮೇಲೆ
ಎಷ್ಟೊಂದು ಪ್ರೀತಿ
ಮಗ ಜಾಣನಾಗಲೆಂದು
ಕಲಿಸುತ್ತಾಳೆ ರೀತಿ ನೀತಿ ■

ಕುಂಚ ಪ್ರಪಂಚ





**ಅನನ್ಯಾ ಪಿ.**

4ನೇ ತರಗತಿ, ನಚಿಕೇತ ಪ್ರಾಥಮಿಕ ಶಾಲೆ, ಕೊಪ್ಪ